# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 256 |
| 2 | ಸದಸ್ಯರ ಹೆಸರು | ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ವಿಷಯ | ಕೊಪ್ಪ- 1ನೇ ವೃತ್ತ ಕೇಂದ್ರ ಸ್ಥಾನ ಕೌಡ್ಲೆ ನಾಡ ಕಛೇರಿಯ 13 ಗ್ರಾಮಗಳ ದಾಖಲೆಗಳನ್ನು ಕೊಪ್ಪ ನಾಡಕಛೇರಿಗೆ ವರ್ಗಾವಣೆ ಮಾಡುವ ಬಗ್ಗೆ. |
| 4 | ಉತ್ತರಿಸುವ ದಿನಾಂಕ | 11.07.2018 |
| 5 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕೌಡ್ಲೆ ನಾಡಕಛೇರಿ 1ನೇ ವೃತ್ತದಲ್ಲಿರುವ 13 ಗ್ರಾಮಗಳು ಕೊಪ್ಪ ನಾಡಕಛೇರಿ 2ನೇ ವೃತ್ತಕ್ಕೆ ಹತ್ತಿರವಾಗಿದ್ದು, ಈ 13 ಗ್ರಾಮಗಳ ದಾಖಲೆಗಳನ್ನು ಕೊಪ್ಪ ನಾಡಕಛೇರಿ 2ನೇ ವೃತ್ತ ಇಲ್ಲಿಗೆ ಈ ಹಿಂದೆ ವರ್ಗಾಯಿಸಲು ಕೋರಿದ್ದರೂ ಸಹ ಈವರೆಗೆ ಕ್ರಮ ಕೈಗೊಳ್ಳದಿರಲು ಕಾರಣಗಳೇನು?(ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಕಂಇ 33 ಡಿ ಎಸ್ ಪಿ 2012 ದಿನಾಂಕ: 05-06-2012 ರಲ್ಲಿ ಮದ್ದೂರು ತಾಲ್ಲೂಕಿನ ಕೊಪ್ಪ ಹೋಬಳಿಯನ್ನು ಈ ಕೆಳಕಂಡಂತೆ 3 ವೃತ್ತಗಳಾಗಿ ವಿಂಗಡಿಸಲಾಗಿದೆ.<br><br>ವೃತ್ತ / ಗ್ರಾಮುಗಳು / ಕೇಂದ್ರಸ್ಥಾನ<br>ಕೊಪ್ಪ-1ನೇ ವೃತ್ತ / 15 ಗ್ರಾಮಗಳು / ಕೌಡ್ಲೆ<br>ಕೊಪ್ಪ-2ನೇ ವೃತ್ತ / 16 ಗ್ರಾಮಗಳು / ಕೊಪ್ಪ<br>ಕೊಪ್ಪ-3ನೇ ವೃತ್ತ / 13 ಗ್ರಾಮಗಳು / ಬೆಸಗರಹಳ್ಳಿ<br><br>ಕೌಡ್ಲೆ ನಾಡಕಛೇರಿಯು ಕೊಪ್ಪ-1ನೇ ವೃತ್ತದ ವ್ಯಾಪ್ತಿಯಲ್ಲಿ ಬರಲಿದ್ದು ಈ ವೃತ್ತಕ್ಕೆ ಒಟ್ಟು 15 (ಕೌಡ್ಲೆ, ಯಡವನಹಳ್ಳಿ, ಬೋಳಾರೆ, ಬೆಕ್ಕಳಲೆ, ಕಿರಂಗೂರು, ಡಿ.ಮಲ್ಲಿಗೆರೆ, ಆಬಲವಾಡಿ, ಅವ್ವೇರಹಳ್ಳಿ, ಮಾರಂಗೆರೆ, ಸೋಮನಹಳ್ಳಿ, ಹಳೇಹಳ್ಳಿ, ಹರಳಕೆರೆ, ತರೀಕೆರೆ, ಮೂಡ್ಯ, ಹೊಸಗಾವಿ) ಗ್ರಾಮಗಳಿರುತ್ತವೆ. ಈ ಗ್ರಾಮಗಳ ಪೈಕಿ 13 ಗ್ರಾಮಗಳು ಅಂದರೆ ಆಬಲವಾಡಿ, ಅವ್ವೇರಹಳ್ಳಿ, ಹೊಸಗಾವಿ, ಚಿಕ್ಕಹೊಸಗಾವಿ -(ಹೊಸಗಾವಿ ಗ್ರಾಮಕ್ಕೆ ದಾಖ್ಲೆ ಗ್ರಾಮ) ಮಲ್ಲಿಗೆರೆ, ತರೀಕೆರೆ, ತರಿಕೆರೆ ಕಾಲೋನಿ-(ತರಿಕೆರೆ ಗ್ರಾಮಕ್ಕೆ ದಾಖ್ಲೆಗ್ರಾಮ), ಹರಳಕೆರೆ, ಹಳೇಹಳ್ಳಿ, ಚನ್ನಮ್ಮನಕೊಪ್ಪಲು-(ಹಳೇಹಳ್ಳಿ ಗ್ರಾಮಕ್ಕೆ ದಾಖ್ಲೆ ಗ್ರಾಮ) ಸೋಮನಹಳ್ಳಿ, ಮೂಡ್ಯ, ಮಾರಂಗೆರೆ ಗಳನ್ನು ಕೊಪ್ಪ-2ನೇ ವೃತ್ತದ ವ್ಯಾಪ್ತಿಯಲ್ಲಿರುವ ಕೊಪ್ಪ ನಾಡಕಛೇರಿಗೆ ಮರು ಹಂಚಿಕೆ ಮಾಡಿಸಿಕೊಡುವಂತೆ ಕೊಪ್ಪ ಹೋಬಳಿ-1ನೇ ವೃತ್ತದ ವ್ಯಾಪ್ತಿಯ ಗ್ರಾಮಸ್ಥರು ದಿನಾಂಕ: 07-04-2017 ರಂತೆ ಮನವಿ ಸಲ್ಲಿಸಿ ಕೋರಿರುತ್ತಾರೆ.<br><br>ಕೊಪ್ಪ-1ನೇ ವೃತ್ತದ ವ್ಯಾಪ್ತಿಯ ಗ್ರಾ.ಮಗಳಲ್ಲಿ ಕೊಪ್ಪ-2ನೇ ವೃತ್ತಕ್ಕೆ ಮೇಲೆ ವಿವರಿಸಿದ 13 ಗ್ರಾಮಗಳ ಪೈಕಿ 11 ಗ್ರಾಮಗಳನ್ನು ಕೊಪ್ಪ-2ನೇ ವೃತ್ತಕ್ಕೆ ಸೇರಿಸಲು ಪ್ರಸ್ತಾವನೆಯು ಸರ್ಕಾರದಲ್ಲಿ ಸ್ವೀಕೃತವಾಗಿರುತ್ತದೆ. ಸದರಿ 11 ಗ್ರಾಮಗಳನ್ನು ಹಂಚಿಕೆ ಮಾಡಿದಲ್ಲಿ ಕೊಪ್ಪ 2ನೇ ವೃತ್ತಕ್ಕೆ ಈಗಾಗಲೇ 16 ಗ್ರಾಮಗಳಿದ್ದು, (ಕೊಪ್ಪ ನಾಡಕಛೇರಿಗೆ) ಒಟ್ಟು 27 ಗ್ರಾಮಗಳಾಗುತ್ತವೆ. ಅಲ್ಲದೇ ಕೌಡ್ಲೆ (ಕೊಪ್ಪ-1) ನಾಡಕಛೇರಿಗೆ ಕೇವಲ 4 ಗ್ರಾಮಗಳು ಮಾತ್ರ ಉಳಿಯುತ್ತವೆ. ಈ 4 ಗ್ರಾಮಗಳಿಗೆ ಒಂದು ನಾಡಕಛೇರಿ ಅವಶ್ಯಕತೆ ಇದೆಯೆ ಎಂಬ ಬಗ್ಗೆ ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ. |
| (ಆ) | ಸದರಿ ವಿಷಯದ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳು ಸುಮಾರು 2 ವರ್ಷಗಳಿಂದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದರೂ ಸಹ ಈ ಬಗ್ಗೆ ಕ್ರಮ ಕೈಗೊಳ್ಳದೇ ಇರಲು ಕಾರಣವೇನು. | |
| (ಇ) | ಸದರಿ ವಿಷಯದ ಬಗ್ಗೆ ಸಾರ್ವಜನಿಕ ರಿಗೆ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಸ್ಥಳಾಂತರಿಸುವ ಬಗ್ಗೆ ಕಾಲಮಿತಿಯನ್ನು ನಿಗದಿಪಡಿಸಿದೆಯೇ? (ವಿವರ ನೀಡುವುದು) | |

ಕಂಇ 105 ಭೂದಾಸ 2018

ಆರ್.ವಿ.ದೇಶಪಾಂಡೆ
ಕಂದಾಯ ಹಾಗೂ ಕೌಶಲ್ಯಾಭಿವೃದ್ಧಿ
ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು